**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

ಸಿ.ಸಿ.ಸಂಖ್ಯೆ.742/2018

**ಪಿರ್ಯಾದಿಃ** ರಾಜ್ಯದ ಪರವಾಗಿ ಅಬಕಾರಿ ಉಪ ನಿರೀಕ್ಷಕರು,
ಕೊಳ್ಳೇಗಾಲ ವಲಯ, ಕೊಳ್ಳೇಗಾಲ.

**ವಿರುದ್ಧ**

**ಆರೋಪಿಃ** 1. ಶ್ರೀ. ರಾಚಯ್ಯ @ಸರಪಣಿ ರಾಚಯ್ಯ ಬಿನ್ ಪಟ್ಟಯ್ಯ, 45 ವರ್ಷ
**ವಾಸಃ** ಬೈರನತ್ತ ಗ್ರಾಮ,
ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅನ್ವಯ ಆರೋಪಿಗಳ ಹೇಳಿಕೆ**

**ಪ್ರಶ್ನೆ** :1: ಅಭಿಯೋಜನೆ ಪರ ಸಾಕ್ಷಿಗಳು ನುಡಿದ ಸಾಕ್ಷ್ಯವನ್ನು ನೀವು ಕೇಳಿದ್ದೀರಾ ಹಾಗೂ ಅರ್ಥ ಮಾಡಿಕೊಂಡಿದ್ದೀರಾ?

ಉತ್ತರಃ

**ಪ್ರಶ್ನೆ :2:** ಫ್ರಾಸಾ-2, ಶ್ರೀ. ರವಿಕುಮಾರ್.ಬಿ, ಅಬಕಾರಿ ಉಪ ನಿರೀಕ್ಷಕರು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 04.05.2018 ರಂದು ರಾಜ್ಯ ವಿಧಾನಸಭಾ ಚುನಾವಣೆ ಸಂಬಂಧ ಚಾಸಾ-1 ಹಾಗೂ ಅವರು ಇಲಾಖಾ ವಾಹನ ಬೊಲೆರೋ ಕೆಎ-10-ಜಿ-0567 ವಾಹನದಲ್ಲಿ ಹನೂರು ಟೌನ್ ನ ಎ.ಪಿ.ಎಂ.ಸಿ. ಮಾರುಕಟ್ಟೆಯ ಬಳಿ ಗಸ್ತು ಕಾರ್ಯ ನಡೆಸುತ್ತಿರುವಾಗ ರಾತ್ರಿ ಸುಮಾರು 8.30 ಗಂಟೆ ಸಮಯದಲ್ಲಿ ಚಾಸಾ-1 ರವರಿಗೆ ಬೈರನತ್ತ ಗ್ರಾಮದ ರಾಚಯ್ಯ ಅಲಿಯಾಸ್ ಸರ್ಪಾಣಿ ರಾಚಯ್ಯ ಎನ್ನುವವರು ತಮ್ಮ ದ್ವಿಚಕ್ರ ವಾಹನ ಸಂಖ್ಯೆ ಕೆಎ-10-ಕೆ-6634 ಹೀರೋಹೊಂಡಾ ಸ್ಪೆಂಡರ್ ಬೈಕ್ ನಲ್ಲಿ ಹಿಂಬದಿ ಸೀಟಿನ ಹಿಂಭಾಗ ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಸದರಿ ಮಾಹಿತಿಯಂತೆ, ಆತನನ್ನು ಜಿ.ವಿ. ಗೌಡ ಪದವಿಪೂರ್ವ

ಕಾಲೇಜಿನ ಬಳಿ ರಾತ್ರಿ 9.30 ರ ಸಮಯದಲ್ಲಿ ವಾಚ್ ಮಾಡಿದ್ದಲ್ಲಿ ಮುದ್ದೆಮಾಲಿನ ಸಮೇತ ಹಿಡಿಯಬಹುದು ಎಂದು ಭಾತ್ಮೀ ಇರುವುದಾಗಿ ತಿಳಿಸಿರುತ್ತಾರೆ. ನಂತರ ಚಾಸಾ-2 ಮತ್ತು 3 ರವರೊಂದಿಗೆ ಹನೂರು-ಬಂಡಳ್ಳಿ ರಸ್ತೆಯಲ್ಲಿ ಬರುವ ಜಿ.ವಿ.ಗೌಡ ಪದವಿಪೂರ್ವ ಕಾಲೇಜಿನ ರಸ್ತೆಯ ಬಳಿ ಹೋಗಿ ಹನೂರು ಕಡೆಯಿಂದ ಬರುವ ವಾಹನಗಳಿಗೆ ಕಾಯುತ್ತಾ ನಿಂತಿದ್ದಾಗ ರಾತ್ರಿ 9.30 ರ ಸಮಯದಲ್ಲಿ ಹನೂರು ಪಟ್ಟಣದ ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿದ್ದು, ಅದನ್ನು ಟಾರ್ಚ್ ಹಾಗೂ ಕೈಸನ್ನೆಯಿಂದ ನಿಲ್ಲಿಸಲು ಪ್ರಯತ್ನಿಸಿದಾಗ ನೀವು ಸುಮಾರು 20 ಮೀಟರ್ ಅಂತರದಲ್ಲಿ ಗಾಬರಿಯಿಂದ ಗಾಡಿ ನಿಲ್ಲಿಸಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು, ನಿಮ್ಮನ್ನು ಹಿಡಿದು ಹೆಸರನ್ನು ಕೇಳಲಾಗಿ ನೀವು ನಿಮ್ಮ ಹೆಸರು ರಾಚಯ್ಯ ಅಃ ಸರ್ಪಣಿ ರಾಚಯ್ಯ ಬಿನ್ ಪಟ್ಟಯ್ಯ ಎಂದು ತಿಳಿಸಿದ್ದು, ನಂತರ ಚಲಾಯಿಸಿಕೊಂಡು ಬಂದ ಮೋಟಾರ್ ಬೈಕ್ ನ್ನು ಪರಿಶೀಲಿಸಲಾಗಿ, ಹಿಂಬದಿ ಸೀಟಿನಲ್ಲಿ ಬಿಳಿ ಪ್ಲಾಸ್ಟಿಕ್ ಚೀಲ ಇರುವುದು ಕಂಡುಬಂದಿರುತ್ತದೆ. ನಂತರ ವಾಹನದ ನಂಬರ್ ನ್ನು ಪರಿಶೀಲಿಸಲಾಗಿ ಭಾತ್ಮೀಯಿಂದ ಬಂದ ವಾಹನದ ಸಂಖ್ಯೆ ಹಾಗೂ ಸದರಿ ವಾಹನಕ್ಕೆ ತಾಳೆಯಾಗಿರುತ್ತದೆ. ನಂತರ ಚಾಸಾ-2 ಮತ್ತು 3 ರವರ ಸಮಕ್ಷಮ ನಿಮ್ಮನ್ನು ಚೀಲದಲ್ಲಿ ಏನು ಇದೆ ಎಂದು ಕೇಳಲಾಗಿ ಚೀಲದಲ್ಲಿ ಮದ್ಯದ ಟೆಟ್ರಾ ಪ್ಯಾಕ್ ಇರುತ್ತವೆ ಎಂದು ನುಡಿದಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

**ಪ್ರಶ್ನೆ :3:** ಪ್ರಾಸಾ-2, ಶ್ರೀ. ರವಿಕುಮಾರ್.ಬಿ, ಇವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಂತರ ಪಂಚರ ಸಮಕ್ಷಮ ಸದರಿ ಚೀಲವನ್ನು ಬಿಚ್ಚಿ ನೋಡಲಾಗಿ ಅದರಲ್ಲಿ 90 ಎಂ ಎಲ್ ನ 144 ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕ್‌ಗಳು ಇರುವುದು ಕಂಡುಬಂದಿರುತ್ತದೆ. ನಂತರ ನಿಮ್ಮ ಬಳಿ ಸದರಿ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಹೊಂದಲು ಹಾಗೂ ಸಾಗಾಣಿಕೆ ಮಾಡಲು ಪರವಾನಿಗೆ ಇರುತ್ತದೆಯೇ ಎಂದು ಕೇಳಲಾಗಿ ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತೀರಿ, ಸದರಿ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಎಲ್ಲಿಂದ ಮತ್ತು ಯಾವ ಕಾರಣಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದೆ ಎಂದು ಕೇಳಲಾಗಿ ನೀವು ಅವುಗಳನ್ನು ಹನೂರು ಪಟ್ಟಣದ ವಿವಿಧ ಮದ್ಯದ ಅಂಗಡಿಗಳಿಂದ ಖರೀದಿ ಮಾಡಿ ಬೈರನತ್ತ ಗ್ರಾಮದಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದೆ ಎಂದು ನುಡಿದಿದ್ದು, ನಂತರ ಸದರಿ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು

ಪರಿಶೀಲಿಸಲಾಗಿ ಎಲ್ಲಾ ಟೆಟ್ರಾ ಪ್ಯಾಕ್ ಗಳ ಮೇಲೆ ಅಬಕಾರಿ ಭದ್ರತಾ ಸೀಲನ್ನು ಅಳಿಸಿರುವುದು ಕಂಡು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

**ಪ್ರಶ್ನೆ :4:** ಪ್ರಾಸಾ-3, ಶ್ರೀ. ಅಬೂಬಕರ್ ಮುಜಾವರ್, ಅಬಕಾರಿ ಉಪ ಅಧೀಕ್ಷಕರು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 04.05.2018 ರಂದು ಅವರು ವಿಧಾನಸಭಾ ಚುನಾವಣಾ ಪ್ರಯುಕ್ತ ಕೊಳ್ಳೇಗಾಲ ವಲಯದ ಮ.ಮ. ಬೆಟ್ಟದ ರಸ್ತೆಯಲ್ಲಿರುವಾಗ ಎ.ಪಿ.ಎಂ.ಸಿ. ಚೆಕ್ ಪೋಸ್ಟ್ ಹತ್ತಿರ ಚಾಸಾ-4 ರವರೊಂದಿಗೆ ಅಬಕಾರಿ ಗಸ್ತಿನಲ್ಲಿರಬೇಕಾದರೆ ರಾತ್ರಿ 8.35 ಗಂಟೆ ಸಮಯದಲ್ಲಿ ಭೈರನತ್ತ ಗ್ರಾಮದ ರಾಚಯ್ಯ ಅಃ ಸರಪಳಿ ಎನ್ನುವವರು ಕೆಎ-10-ಕೆ-6634 ಹೀರೋಹೊಂಡಾ ಸ್ಪ್ಲೆಂಡರ್ ಪ್ಲಸ್ ವಾಹನದಲ್ಲಿ ತಮ್ಮ ಹಿಂದಿನ ಸೀಟಿನಲ್ಲಿ ಬಿಳಿ ಬಣ್ಣದ ಚೀಲವನ್ನು ಕಟ್ಟಿಕೊಂಡು ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿರುವುದಾಗಿ ಹಾಗೂ ಬಂಡಳ್ಳಿ ಗ್ರಾಮದ ಜಿ.ವಿ. ಗೌಡ ಪ್ರಥಮ ದರ್ಜೆ ಕಾಲೇಜಿನ ಮುಂಭಾಗದ ರಸ್ತೆಯಲ್ಲಿ ಕಾದು ನಿಂತರೆ ಆತನನ್ನು ಮುದ್ದೆಮಾಲು ಸಮೇತ ಹಿಡಿಯಬಹುದು ಎಂದು ಮಾಹಿತಿ ಬಂದಿದ್ದು, ನಂತರ ಸದರಿ ಭಾತ್ಮೀಯ ವಿಚಾರವನ್ನು ಚಾಸಾ-4 ರವರಿಗೆ ತಿಳಿಸಿ ಚಾಸಾ 2 ಮತ್ತು 3 ರವರೊಂದಿಗೆ ಸ್ಥಳಕ್ಕೆ ಹೋಗಿ ಜಿ.ವಿ. ಗೌಡ ಪ್ರಥಮ ದರ್ಜೆ ಕಾಲೇಜಿನ ಮುಂಭಾಗದ ರಸ್ತೆಯಲ್ಲಿ ಕಾದು ನಿಂತಿದ್ದಾಗ ಹನೂರು ರಸ್ತೆಯ ಕಡೆಯಿಂದ ಒಂದು ವಾಹನ ಬರುತ್ತಿದ್ದು ನಂತರ ಸದರಿ ದ್ವಿಚಕ್ರ ವಾಹನವನ್ನು ತಡೆದು ನಿಲ್ಲಿಸಿದಾಗ ನೀವು ಅವರನ್ನು ಸಮವಸ್ತ್ರದಲ್ಲಿರುವುದನ್ನು ನೋಡಿ ಗಾಬರಿಗೊಂಡಂತೆ ಬಾಸವಾಗಿ ನಂತರ ನೀವು ಚಲಾಯಿಸಿಕೊಂಡು ಬಂದ ದ್ವಿಚಕ್ರವಾಹನವನ್ನು ಪರಿಶೀಲಿಸಿ ನೋಡಲಾಗಿ ಭಾತ್ಮೀಯಲ್ಲಿ ತಿಳಿಸಿದ ದ್ವಿಚಕ್ರ ವಾಹನ ಸಂಖ್ಯೆಗೂ, ನೀವು ಚಲಾಯಿಸಿಕೊಂಡು ಬಂದ ದ್ವಿಚಕ್ರ ವಾಹನಕ್ಕೂ ತಾಳೆ ಆದ್ದರಿಂದ ದ್ವಿಚಕ್ರ ವಾಹನದ ಹಿಂಬದಿ ಕಟ್ಟಿದ್ದ ಬಿಳಿ ಚೀಲದಲ್ಲಿ ಏನಿದೆ ಎಂದು ಕೇಳಲಾಗಿ ನೀವು ಯಾವುದೇ ಉತ್ತರ ನೀಡಲಿಲ್ಲ. ನಂತರ ಹೆಸರನ್ನು ಕೇಳಲಾಗಿ ನೀವು ನಿಮ್ಮ ಹೆಸರು ರಾಚಯ್ಯ ಅಃ ಸರಪಳಿ ರಾಚಯ್ಯ ಎಂದು ತಿಳಿಸಿರುತ್ತೀರಿ ನಂತರ ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಇದ್ದ ಬಿಳಿ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡುಬಂದಿರುತ್ತದೆ. ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಸಾಗಾಣಿಕೆ ಮಾಡಲು ಪರವಾನಿಗೆ ಇದೆಯೇ ಎಂದು ಕೇಳಲಾಗಿ ನೀವು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿದ್ದು, ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಬೇರೆ ಬೇರೆ ಅಂಗಡಿಗಳಿಂದ ಖರೀದಿ

ಮಾಡಿ ಗ್ರಾಮದಲ್ಲಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದೇನೆ ಎಂದು ತಿಳಿಸಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

**ಪ್ರಶ್ನೆ :5:** ಫ್ರಾಸಾ–3, ಶ್ರೀ. ಅಬೂಬಕರ್ ಮುಜಾವರ್, ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಿಮ್ಮ ಬಳಿ ಇದ್ದ ಪ್ಲಾಸ್ಟಿಕ್ ಚೀಲದಲ್ಲಿದ್ದ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಪರಿಶೀಲಿಸಲಾಗಿ ಅವುಗಳಲ್ಲಿ 90 ಎಂ ಎಲ್ ನ 144 ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡುಬಂದಿರುತ್ತದೆ. ನಂತರ ಮದ್ಯವನ್ನು ಸಾಗಾಣಿಕೆ ಮಾಡಲು ಬಳಸಿದ ವಾಹನದ ಮಾಲೀಕತ್ವದ ಬಗ್ಗೆ ಪರಿಶೀಲಿಸಲಾಗಿ ಸದರಿ ದ್ವಿಚಕ್ರ ವಾಹನವನ್ನು ಬೇರೆಯವರಿಂದ ಖರೀದಿ ಮಾಡಿದ್ದು, ಇಲ್ಲಿಯವರೆಗೂ ನೀವು ನಿಮ್ಮ ಹೆಸರಿಗೆ ವರ್ಗಾಯಿಸಿಕೊಂಡಿರುವುದಿಲ್ಲ ಎಂದು ತಿಳಿಸಿದ್ದು, ನಂತರ ಮುದ್ದೆಮಾಲುಗಳನ್ನು ಮಹಜರ್ ಕ್ರಮದ ಮೂಲಕ ರಾತ್ರಿ 9.30 ರಿಂದ 10.45 ಗಂಟೆಯವರೆಗೆ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಿಮ್ಮ ವಿರುದ್ಧ ಪ್ರಕರಣದ ದಾಖಲಿಸಿ ಪ್ರಥಮ ವರ್ತಮಾನ ವರದಿ ತಯಾರಿಸಿ ನಿಮ್ಮ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

**ಪ್ರಶ್ನೆ :6:** ಫ್ರಾಸಾ–5, ಶ್ರೀ. ಟಿ.ರಾಮೇಗೌಡ, ನಿವೃತ್ತ ಅಬಕಾರಿ ಉಪ–ನಿರೀಕ್ಷಕರು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 12.06.2018 ರಂದು ಪ್ರಕರಣದ ಕಡತ ಹಾಗೂ ಮುದ್ದೆ ಮಾಲುಗಳನ್ನು ಚಾಸಾ 1 ರವರಿಂದ ಪಡೆದುಕೊಂಡು, ನಂತರ ತನಿಖೆಯಿಂದ ನಿಮ್ಮ ವಿರುದ್ಧ ಆರೋಪ ಸಾಭೀತಾದ ಕಾರಣ ದಿಃ 16.10.2018 ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

**ಪ್ರಶ್ನೆ 7**: ನೀವು ಈ ಪ್ರಕರಣದ ಬಗ್ಗೆ ಬೇರೆ ಹೆಚ್ಚಿನ ವಿಷಯವನ್ನೇನಾದರೂ ಹೇಳುವುದು ಇದೆಯೇ?

ಉತ್ತರಃ

**ಪ್ರಶ್ನೆ**:**8**: ನೀವು ನಿಮ್ಮ ಪರವಾಗಿ ಯಾವುದಾದರೂ ಸಾಕ್ಷ್ಯವನ್ನು ಅಥವಾ ದಾಖಲೆಗಳನ್ನು ಹಾಜರು ಪಡಿಸುತ್ತೀರೋ?

ಉತ್ತರಃ

(ನನ್ನ ಸಮಕ್ಷಮದಲ್ಲಿ ಆರೋಪಿ ವಿಚಾರಣೆಯನ್ನು ನಡೆಸಿದ್ದು, ಆರೋಪಿ ನೀಡಿದ ಉತ್ತರಗಳನ್ನು ಯಥಾವತ್ತಾಗಿ ಮತ್ತು ಸಂಪೂರ್ಣವಾಗಿ ದಾಖಲು ಮಾಡಿಕೊಂಡಿದ್ದೇನೆಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ 30ನೇ ಜೂನ್ ಮಾಹೆ 2026.

**(ಎಂ. ರಂಜಿತ್ ಕುಮಾರ್)**
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಳ್ಳೇಗಾಲ.